ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 13-11-1997.

# *ಸಂಗಮಯುಗದ ಪ್ರಾಪ್ತಿಗಳ ಪ್ರಾರಬ್ಧದ ಅನುಭವ ಮಾಡಿ, ಮಾಸ್ಟರ್ ದಾತ, ಮಹಾ ಸಹಯೋಗಿಯಾಗಿರಿ.*

(संगमयुग के प्राप्तियों की प्रालब्ध का अनुभव करो, मास्टर दाता, महा सहयोगी बनो)

ಇಂದು ಭಾಗ್ಯವಿಧಾತ ತಂದೆ ತನ್ನ ಶ್ರೇಷ್ಠ ಭಾಗ್ಯವಂತ ಮಕ್ಕಳನ್ನು ನೋಡುತ್ತಿದ್ದರು. ಪ್ರತಿಯೊಂದು ಮಗುವಿನ ಭಾಗ್ಯದ ರೇಖೆಗಳನ್ನು ನೋಡಿ ಭಾಗ್ಯವಿಧಾತ ತಂದೆ ಹರ್ಷಿತರಾಗುತ್ತಾರೆ. ಏಕೆಂದರೆ ಇಡೀ ಕಲ್ಪದಲ್ಲಿ ಚಕ್ರವನ್ನುಹಾಕಿದರೆ ನಿಮ್ಮಂತಹ ಶ್ರೇಷ್ಠ ಭಾಗ್ಯ ಬೇರೆ ಯಾವುದೇ ಧರ್ಮ ಆತ್ಮ, ಮಹಾನ್ ಆತ್ಮ, ರಾಜ್ಯ ಅಧಿಕಾರಿ ಆತ್ಮ, ಯಾರದ್ದು ಸಹ ಇಷ್ಟು ದೊಡ್ಡ ಭಾಗ್ಯವಿಲ್ಲ. ಸಂಗಮಯುಗೀ ಶ್ರೇಷ್ಠ ಆತ್ಮರಾದ ನಿಮ್ಮ ಭಾಗ್ಯ ಎಷ್ಟು ಶ್ರೇಷ್ಠವಾಗಿದೆ. ಮಸ್ತಕದಲ್ಲಿ ತಮ್ಮ ಶ್ರೇಷ್ಠ ಭಾಗ್ಯದ ರೇಖೆಗಳನ್ನು ನೋಡುತ್ತೀರಾ? ಬಾಪ್‌ದಾದಾರವರು ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ಹೊಳೆಯುತ್ತಿರುವ ಜ್ಯೋತಿಯ ಶ್ರೇಷ್ಠ ರೇಖೆಗಳನ್ನು ನೋಡುತ್ತಿದ್ದಾರೆ. ನೀವು ಸಹ ತಮ್ಮ ರೇಖೆಗಳನ್ನು ನೋಡಿಕೊಳ್ಳುತ್ತೀರಾ? ನಯನಗಳಲ್ಲಿ ನೋಡಿದರೆ ಸ್ನೇಹ ಹಾಗೂ ಶಕ್ತಿಯ ರೇಖೆಗಳು ಸ್ಪಷ್ಟವಾಗಿವೆ. ಮುಖವನ್ನು ನೋಡಿದರೆ ಮಧುರ ಶ್ರೇಷ್ಠ ವಾಣಿಯ ರೇಖೆಗಳು ಹೊಳೆಯುತ್ತಿದೆ. ತುಟಿಗಳಲ್ಲಿ ನೋಡಿದರೆ ಆತ್ಮಿಕ ಮುಗುಳ್ನಗೆ, ಆತ್ಮಿಕ ಖುಷಿಯ ಹೊಳಪಿನ ರೇಖೆಗಳು ಕಾಣಿಸುತ್ತಿವೆ. ಹೃದಯದಲ್ಲಿ ನೋಡಿದರೆ ಹೃದಯರಾಮನ ಪ್ರೀತಿಯಲ್ಲಿ ಲವಲೀನರಾಗಿರುವ ರೇಖೆಗಳು ಸ್ಪಷ್ಟವಾಗಿವೆ. ಕೈಗಳಲ್ಲಿ ನೋಡಿದರೆ ಎರಡು ಕೈಗಳಲ್ಲಿ ಸರ್ವ ಖಜಾನೆಗಳು ಸಂಪನ್ನವಾಗಿರುವ ರೇಖೆಗಳು ಕಾಣಿಸುತ್ತಿವೆ. ಕಾಲುಗಳಲ್ಲಿ ನೋಡಿದರೆ ಪ್ರತಿ ಹೆಜ್ಜೆಯಲ್ಲಿ ಪದಮದ ಪ್ರಾಪ್ತಿಯ ರೇಖೆಗಳು ಸ್ಪಷ್ಟವಾಗಿವೆ. ಎಷ್ಟು ದೊಡ್ಡ ಭಾಗ್ಯವಾಗಿದೆ.

ಭಾಗ್ಯ ವಿಧಾತಾ ತಂದೆ ಪ್ರತೀ ಮಗುವಿಗೂ ಪುರುಷಾರ್ಥದಿಂದ, ಶ್ರೇಷ್ಠ ಕರ್ಮಗಳ ಲೇಖನಿಯಿಂದ ಈ ಎಲ್ಲಾ ರೇಖೆಗಳನ್ನು ಬರೆಯುವ ಅನುಮತಿ ನೀಡಿದ್ದಾರೆ, ಸಂಪೂರ್ಣ ಅನುಮತಿಯನ್ನು ಕೊಟ್ಟಿದ್ದಾರೆ. ಎಷ್ಟು ಉದ್ದವಾದ ಭಾಗ್ಯರೇಖೆಯನ್ನು ಎಳೆಯಲು ಬಯಸುತ್ತೀರೋ ಅಷ್ಟು ಎಳೆಯಬಹುದು. ಆದರೆ ಸಮಯದೊಳಗೆಯೇ ಎಳೆಯಬೇಕು. ಯಾರಿಗೆ ಎಷ್ಟು ಶ್ರೇಷ್ಠ ಗೆರೆಯನ್ನು ಎಳೆಯಬೇಕು ಎಂದಿದೆಯೋ ಅವರು ಸ್ವಯಂ ಎಳೆದುಕೊಳ್ಳಬಹುದು, ತಂದೆಯಂತು ಲೇಖನಿಯನ್ನು ನಿಮ್ಮ ಕೈಯಲ್ಲಿ ಕೊಟ್ಟಿದ್ದಾರೆ. ಅಂದಮೇಲೆ ಇಂತಹ ಗೆರೆಯನ್ನು ಎಳೆಯಲು ಬರುತ್ತದೆಯೇ? ಎಳೆದಿದ್ದೀರಾ ಅಥವಾ ಎಳೆಯಲು ಬರುವುದಿಲ್ಲವೇ? ಎಲ್ಲರಿಗೂ ಬರುತ್ತದೆ ಅಲ್ಲವೇ? (ಹೌದು) ಬಹಳ ಒಳ್ಳೆಯದು. ನೋಡಿ, ಈಗಿನ ಭಾಗ್ಯದ ಗೆರೆ ನಿಮ್ಮನ್ನು ಇಡೀ ಕಲ್ಪದಲ್ಲಿ ಶ್ರೇಷ್ಠರನ್ನಾಗಿ ಮಾಡುತ್ತದೆ, 21 ಜನ್ಮವಂತೂ ಸದಾ ಸಂಪನ್ನ ಹಾಗೂ ಸುಖಿಯಾಗಿರುವ ರೇಖೆಯಂತು ನಡೆಯುತ್ತಲೇ ಇರುತ್ತದೆ ಹಾಗೂ ದ್ವಾಪರ, ಕಲಿಯುಗದಲ್ಲೂ ಸಹ ನೀವು ಪೂಜ್ಯರಾಗುವ ರೇಖೆ ಶ್ರೇಷ್ಠವಾಗಿರುತ್ತದೆ. ಅಂದಮೇಲೆ ಈ ಸಮಯದ ಭಾಗ್ಯದ ರೇಖೆ ಇಡೀ ಕಲ್ಪ ಸದಾ ಜೊತೆಯಲ್ಲಿ ನಡೆಯುವುದಾಗಿದೆ,

ಏಕೆಂದರೆ ಅವಿನಾಶಿ ತಂದೆಯ ಅವಿನಾಶಿ ರೇಖೆಗಳಾಗಿವೆ. ಅಂದಮೇಲೆ ಸದಾ ನಿಮ್ಮ ಶ್ರೇಷ್ಠ ಭಾಗ್ಯದ ರೇಖೆ ಸ್ಮೃತಿಯಲ್ಲಿ ಇರುತ್ತದೆಯೇ? ಇರುತ್ತದೆ ಆದರೆ ಕೆಲವೊಮ್ಮೆ ಪ್ರತ್ಯಕ್ಷವಾಗಿ ಇರುತ್ತದೆ, ಕೆಲವೊಮ್ಮೆ ಗುಪ್ತವಾಗಿರುತ್ತದೆಯೇ ಅಥವಾ ಸದಾ ಪ್ರತ್ಯಕ್ಷವಾಗಿರುತ್ತದೆಯೇ? ಇದರಲ್ಲಿ ಕಡಿಮೆ ಕೈ ಎತ್ತುತ್ತಿದ್ದೀರಿ. ನೋಡಿಕೊಳ್ಳಿ, ಸದಾ ಪ್ರತ್ಯಕ್ಷವಾಗಿರಲಿ. ಹಳೆಯ ಸ್ಮೃತಿಗಳ ಹಾಗೂ ಹಳೆಯ ಸಂಸ್ಕಾರಗಳ ರೇಖೆಗಳು ಗುಪ್ತವಾಗುವುದೇ ಪ್ರತ್ಯಕ್ಷವಾಗುವ ಚಿಹ್ನೆಯಾಗಿದೆ . ಎಂದೂ ಸಹ ಹಳೆಯ ಸಂಸ್ಕಾರಗಳ ರೇಖೆಗಳು ಹಾಗೂ ಹಳೆಯ ವಿಷಯಗಳ ಸ್ಮೃತಿಯ ರೇಖೆ ಪ್ರತ್ಯಕ್ಷವಾಗದಿರಲಿ. ಗುಪ್ತವಾಗಿರಲಿ. ಹಾಗೂ ಗುಪ್ತ ಆಗುತ್ತಾ ಆಗುತ್ತಾ ಸಮಾಪ್ತಿಯಾಗಿ ಬಿಡಲಿ. ಎಲ್ಲಿ ಶ್ರೇಷ್ಠ ಭಾಗ್ಯಗಳ ರೇಖೆಗಳು ಪ್ರತ್ಯಕ್ಷವಾಗಿವೆಯೋ, ಅಲ್ಲಿ ಹಳೆಯ ರೇಖೆಗಳು ಪ್ರತ್ಯಕ್ಷವಾಗುವುದು ಅಸಂಭವವಾಗಿದೆ. ಒಂದುವೇಳೆ ಆಗುತ್ತಿದೆ ಎಂದರೆ ಶ್ರೇಷ್ಠ ಭಾಗ್ಯದ ರೇಖೆಗಳು ಸದಾ ಪ್ರತ್ಯಕ್ಷವಾಗಿಲ್ಲ ಎಂದು ಸಿದ್ಧವಾಗುತ್ತದೆ. ಅಂದ ಮೇಲೆ ಏನೆಂದು ತಿಳಿಯುವಿರಿ? ಇಷ್ಟು ಶ್ರೇಷ್ಠ ಭಾಗ್ಯದ ರೇಖೆಗಳು ಪ್ರತ್ಯಕ್ಷವಾಗಬೇಕೋ ಅಥವಾ ಗುಪ್ತವಾಗಬೇಕೋ?

ಬಾಪ್‌ದಾದಾ ವರ್ತಮಾನ ಸಮಯ ಎಲ್ಲಾ ಮಕ್ಕಳನ್ನು ವರ್ತಮಾನ ಸಂಗಮಯುಗದ ಪ್ರಾಪ್ತಿಗಳ ಪ್ರಾರಬ್ಧದ ರೂಪದಲ್ಲಿ ನೋಡಲು ಬಯಸುತ್ತಾರೆ. ಬಹಳ ಸಮಯ ಪುರುಷಾರ್ಥ ಮಾಡಿದಿರಿ, ಈಗ ಸ್ವತಃವಾಗಿ ಪುರುಷಾರ್ಥ ನಡೆಯಲಿ, ಪರಿಶ್ರಮದ ಪುರುಷಾರ್ಥವಲ್ಲ. ಅಂತ್ಯದವರೆಗೂ ಪುರುಷಾರ್ಥದ ಪರಿಶ್ರಮ ಮಾಡುತ್ತಲೇ ಇರುತ್ತೀರಾ? ಸಂಗಮಯುಗೀ ಪ್ರಾಪ್ತಿಗಳ ಪ್ರಾರಬ್ಧದ ಅನುಭವ ಈಗ ಮಾಡದಿದ್ದರೆ ಇನ್ನೆಂದು ಮಾಡುವಿರಿ! ಭವಿಷ್ಯದ ಪ್ರಾರಬ್ಧ ಬೇರೆಯ ವಸ್ತುವಾಗಿದೆ. ಅದಂತೂ ನಿಮ್ಮ ಈಗಿನ ಪುರುಷಾರ್ಥದ ಪ್ರಾರಬ್ಧದ ನೆರಳಾಗಿದೆ. ಅದಂತೂ ನಿಮ್ಮ ಹಿಂದೆ ಹಿಂದೆ ಸ್ವತಹವಾಗಿಯೇ ಬರುತ್ತದೆ. ಆದರೆ ಈ ಸಮಯದ ಪ್ರಾಲಬ್ಧ ಪ್ರಾಪ್ತಿ ಮಾಡಿಕೊಳ್ಳುವುದು ವಿಶೇಷ ಮಾತಾಗಿದೆ. ಹೇಗಿದ್ದೀರಿ? ಹೇಗೆ ನಡೆಯುತ್ತಿರುವಿರಿ? ಎಂದು ಯಾರಾದರೂ ಕೇಳಿದರೆ ಇನ್ನೂವರೆಗೂ ಪುರುಷಾರ್ಥವೇ ನಡೆಯುತ್ತಿದೆ ಎಂದು ಹೇಳುತ್ತೀರಬೇಡಿರಿ. ಪುರುಷಾರ್ಥವಂತೂ ಇದೆ ಆದರೆ ಪುರುಷಾರ್ಥದ ಪ್ರಾರಬ್ಧವನ್ನು ಈಗ ಅನುಭವ ಮಾಡಿರಿ. ಆ ಪ್ರಾರಬ್ಧವಾಗಿದೆ ಸರ್ವ ಶಕ್ತಿ ಸಂಪನ್ನ, ಸರ್ವಜ್ಞಾನ ಸಂಪನ್ನ, ಸರ್ವ ವಿಘ್ನ ವಿನಾಶಕ ಮೂರ್ತಿ, ಈಗಿನ ಈ ಪ್ರಾರಬ್ಧ ಭವಿಷ್ಯದಲ್ಲಿ ಸ್ವತಃವಾಗಿಯೇ ಪ್ರಾಪ್ತಿಯಾಗುತ್ತದೆ. ಹೇಗೆ ಭವಿಷ್ಯದಲ್ಲಿ ಕೇವಲ ಪ್ರಾರಬ್ಧ ಇದೆ, ಪುರುಷಾರ್ಥ ಸಮಾಪ್ತಿಯಾಗಿರುತ್ತದೆಯೋ  ಅದೇ ರೀತಿ ಈಗ ಬಾಕಿ ಉಳಿದಿರುವ ಸಮಯದಲ್ಲಿ ಪ್ರಾರಬ್ಧ ಸ್ವರೂಪದ ವಿಶೇಷ ಅನುಭವ ಮಾಡಿ. ಪ್ರಾರಬ್ಧ ಎಂದರೆ ಪುರುಷಾರ್ಥದ ಪ್ರಾರಬ್ಧವಾಗಿರುತ್ತದೆ. ಪುರುಷಾರ್ಥ ಮಾಡಿದ್ದೀರಿ, ಆ ಪುರುಷಾರ್ಥದ ಅನುಸಾರವಾಗಿಯೇ ಪ್ರಾರಬ್ಧದ ಅನುಭವ ಮಾಡುವಿರಿ. ಆದರೆ ಬಾಪ್‌ದಾದಾರವರು ಮಕ್ಕಳಿಂದ ಏನನ್ನು ಬಯಸುತ್ತಾರೆ? ಕೇಳುತ್ತೀರಲ್ಲವೇ ಬಾಪ್‌ದಾದಾರವರು ನಮ್ಮಿಂದ ಏನನ್ನು ಬಯಸುತ್ತಾರೆ? ಅಂದಮೇಲೆ ಬಾಪ್‌ದಾದಾರವರು ಇದನ್ನೇ ಬಯಸುತ್ತಾರೆ- ಈಗ ಸ್ವಲ್ಪ ಸಮಯಕ್ಕಾಗಿ ಪುರುಷಾರ್ಥದ ಪ್ರಾರಬ್ಧದ ಸ್ವರೂಪರಾಗಿರಿ. ಆಗಲು ಸಾಧ್ಯವೇ ಅಥವಾ ಪುರುಷಾರ್ಥದ ಪರಿಶ್ರಮ ಇಷ್ಟವಾಗುತ್ತದೆಯೇ? ಪ್ರಾರಬ್ಧ ಪಡೆದುಕೊಳ್ಳುವವರು ಆಗುವಿರೇ? ಈಗಲೂ ಪುರುಷಾರ್ಥ ಮಾಡುತ್ತಿದ್ದೇನೆ, ಪುರುಷಾರ್ಥ ಆಗಿ ಬಿಡುವುದು, ಮಾಡಿ ತೋರಿಸುತ್ತೇವೆ, ಇಂತಹ ಶಬ್ಧಗಳು ಸಮಾಪ್ತಿಯಾಗಲಿ. ಮಾಡಿ ತೋರಿಸುತ್ತೇವೆ ಅಲ್ಲ, ತೋರಿಸಿರಿ. ಇನ್ನು ಯಾವಾಗ ತೋರಿಸುವಿರಿ? ವಿನಾಶದ ಸಮಯದಲ್ಲಿ ತೋರಿಸುವಿರಾ? ಇದರ

ಬಹಳ ಸಹಜ ವಿಧಿಯೇನೆಂದರೆ ಮಾಸ್ಟರ್ ದಾತಾ ಆಗಿರಿ. ತಂದೆಯಿಂದ ಪಡೆದುಕೊಂಡಿದ್ದೀರಿ ಹಾಗೂ ಪಡೆದುಕೊಳ್ಳುತ್ತಾ ಇರಿ. ಆದರೆ ಆತ್ಮರಿಂದ ಪಡೆದುಕೊಳ್ಳುವ ಭಾವನೆಯನ್ನು ಇಟ್ಟುಕೊಳ್ಳಬೇಡಿ. ಇವರು ಹೀಗೆ ಮಾಡಿದರೆ ಹೀಗಾಗುತ್ತಿತ್ತು. ಇವರು ಬದಲಾದರೆ ನಾನು ಬದಲಾಗುತ್ತೇನೆ, ಇದು ಪಡೆದುಕೊಳ್ಳುವ ಭಾವನೆಯಾಗಿದೆ. ಹೀಗಾಗಬೇಕಿತ್ತು ಅಲ್ಲ ಆದರೆ ಹೀಗೆ ಮಾಡಿ ತೋರಿಸಬೇಕು. ಹೀಗಾಗಿ ಬಿಡಬೇಕು ಎನ್ನಬಾರದು. ಆಗಲೇ ಬೇಕು ಮತ್ತು ನಾನು ಮಾಡಬೇಕು, ನಾನು ತರಂಗಗಳನ್ನು ಕೊಡಬೇಕು, ನಾನು ದಯಾಹೃದಯಿಯಾಗಬೇಕು, ನಾನು ಗುಣಗಳ ಸಹಯೋಗವನ್ನು ಕೊಡಬೇಕು, ನಾನು ಶಕ್ತಿಗಳ ಸಹಯೋಗವನ್ನು ಕೊಡಬೇಕು, ಮಾಸ್ಟರ್ ದಾತಾ ಆಗಿರಿ ತೆಗೆದುಕೊಳ್ಳಬೇಕೆಂದರೆ ಕೇವಲ ಒಬ್ಬ ತಂದೆಯಿಂದ ತೆಗೆದುಕೊಳ್ಳಿರಿ. ಒಂದುವೇಳೆ ಅನ್ಯ ಆತ್ಮರಿಂದ ಸಹ ಸಿಗುತ್ತಿದೆ ಎಂದರೆ ತಂದೆಯಿಂದಲೇ ಪಡೆದುಕೊಂಡಿದ್ದಾರೆ ಅದನ್ನೇ ಕೊಡುತ್ತಿದ್ದಾರೆ. ದಾತಾ ಆಗಿ ವಿಶಾಲ ಹೃದಯಿಯಾಗಿ. ಕೊಡುತ್ತೀರಿ, ಕೊಡುವುದು ಬರುತ್ತದೆಯೇ? ಅಥವಾ ಕೇವಲ ತೆಗೆದುಕೊಳ್ಳುವುದು ಬರುತ್ತದೆಯೇ? ಈಗ ಏನು ಜಮಾ ಮಾಡಿದ್ದೀರಿ ಅದನ್ನು ಕೊಡಿ. ಪರಸ್ಪರದಲ್ಲಿ ಬ್ರಾಹ್ಮಣ ಆತ್ಮರೂ ಸಹ ಮಾಸ್ಟರ್ ದಾತಾರಾಗಿರಿ. ಇತರರು ಕೊಟ್ಟರೆ ನಾನು ಕೊಡುತ್ತೇನೆ, ನಾನು ಕೊಡಬೇಕು ಎಂದು ತಿಳಿಯಿರಿ. ನಿಮ್ಮ ಬಳಿ ಖಜಾನೆ ಇದೆಯೇ? ಸಂಪನ್ನವಾಗಿದೆಯೇ? ಗುಣಗಳಿಂದ ಸಂಪನ್ನವಾಗಿದೆಯೇ? ಶಕ್ತಿಗಳಿಂದ ಸಂಪನ್ನವಾಗಿದೆಯೇ? ಮತ್ತೇಕೆ ಕೊಡುತ್ತಿಲ್ಲ? ತಮಗಾಗಿ ಬಚ್ಚಿಟ್ಟುಕೊಂಡಿದ್ದೀರಾ? ಖಜಾನೆಗಳಿಂದ ಸಂಪನ್ನರಾಗಿದ್ದ ಮೇಲೆ ಕೊಡುತ್ತಾ ಹೋಗಿರಿ. ಇವರು ಏಕೆ ಮಾಡುತ್ತಾರೆ? ಇವರು ಏಕೆ ಹೇಳುತ್ತಾರೆ? ಇಂತಹ ಯೋಚನೆ ಮಾಡಬೇಡಿರಿ. ದಯಾಹೃದಯಿಯಾಗಿ ತಮ್ಮ ಗುಣಗಳ, ತಮ್ಮ ಶಕ್ತಿಗಳ ಸಹಯೋಗ ಕೊಡಿ- ಇದಕ್ಕೆ ಮಾಸ್ಟರ್ ದಾತಾ, ಮಹಾಸಹಯೋಗಿ ಎಂದು ಕರೆಯಲಾಗುತ್ತದೆ. ಮಹಾಸಹಯೋಗಿ, ಸಹಯೋಗಿಯೂ ಅಲ್ಲ, ಮಹಾ ಸಹಯೋಗಿಯಾಗಿರಿ. ಮಹಾದಾತಾ ಆಗಿರಿ. ಬಾಪ್‌ದಾದಾರವರು ಏನನ್ನು ಬಯಸುತ್ತಾರೆ ಎಂದು ತಿಳಿಯಿತೇ?

ಬಾಪ್‌ದಾದಾರವರಿಗೆ ಇನ್ನೂ ಮಕ್ಕಳು ಪುರುಷಾರ್ಥದಲ್ಲಿ ಪರಿಶ್ರಮ ಮಾಡುತ್ತಿರುವುದನ್ನು ನೋಡಲು ಆಗುತ್ತಿಲ್ಲ. ಡೈಮಂಡ್ ಜುಬ್ಲಿ ಸಮಾಪ್ತಿ ಆಯಿತು ಹಾಗೂ ಇನ್ನೂವರೆಗೂ ಕಲೆರಹಿತವಾದ ವಜ್ರವಾಗಲು ಪುರುಷಾರ್ಥದಲ್ಲಿ ತೊಡಗಿದ್ದೀರಿ. ಡೈಮಂಡ್ ಜುಬ್ಲಿ ಅರ್ಥಾತ್ ಪ್ರತಿ ಬ್ರಾಹ್ಮಣ ಆತ್ಮರು (ಡೈಮಂಡ್) ಹೊಳೆಯುತ್ತಿರಲಿ. ನೀವು ಯೋಚಿಸುತ್ತಿರಬಹುದು ನಮ್ಮದಂತೂ ಡೈಮಂಡ್ ಜುಬ್ಲಿ ಆಗಿರಲಿಲ್ಲ, ಅದಂತೂ ದಾದಿಯರದಾಗಿತ್ತು. ನಿಮ್ಮದಾಗಿತ್ತಾ ಅಥವಾ ದಾದಿಯರದ್ದಾಗಿತ್ತಾ, ಯಾರದಾಗಿತ್ತು? ಯಜ್ಞದ ಸ್ಥಾಪನೆಯ ಕಾರ್ಯದ ಡೈಮಂಡ್ ಜುಬ್ಲಿ. ಕೇವಲ ದಾದಿಯರದಲ್ಲ, ಸ್ಥಾಪನೆಯ ಕಾರ್ಯದ ಡೈಮಂಡ್ ಜುಬ್ಲಿ. ಅಂದಮೇಲೆ ನೀವೆಲ್ಲರೂ ಬಲೆ ಎರಡು ವರ್ಷದವರಾಗಿರಲಿ, ಅಥವಾ 12 ವರ್ಷದವರಾಗಿರಲಿ, 50 ವರ್ಷದವರಾಗಿರಲಿ, ಆದರೆ ಸ್ಥಾಪನೆಯ ಕಾರ್ಯದ ನಿಮಿತ್ತ ಆಗಿದ್ದೀರಲ್ಲವೇ ಅಥವಾ ಇಲ್ಲವೇ? ನಿಮಿತ್ತರಾಗಿದ್ದೀರಾ? ಬ್ರಾಹ್ಮಣ ಎಂದರೆ ಬ್ರಹ್ಮಾ ತಂದೆಯ ಜೊತೆ ಸ್ಥಾಪನೆಯ ಕಾರ್ಯದಲ್ಲಿ ನಿಮಿತ್ತ ಆತ್ಮರು. ಅವರೇ ಬ್ರಹ್ಮಾಕುಮಾರ ಅಥವಾ ಬ್ರಹ್ಮಾಕುಮಾರಿ ಎಂದು ಕರೆಯಿಸಿಕೊಳ್ಳಲು ಸಾಧ್ಯ. ಅಂದಮೇಲೆ ಬ್ರಹ್ಮಾಕುಮಾರ, ಕುಮಾರಿ ಎಲ್ಲರೂ ಆಗಿದ್ದೀರಲ್ಲವೇ ಅಥವಾ ಪುರುಷಾರ್ಥಕುಮಾರ ಕುಮಾರಿ ಆಗಿದ್ದೀರಾ? ಏನಾಗಿದ್ದೀರಿ? ಬ್ರಹ್ಮಾಕುಮಾರ, ಬ್ರಹ್ಮಾಕುಮಾರಿಯರು ಅರ್ಥಾತ್- ಜನ್ಮವನ್ನು ಪಡೆದುಕೊಂಡಿದ್ದೀರಿ ಹಾಗೂ ಬ್ರಹ್ಮಾತಂದೆಯ ಜೊತೆಗಾರರು ಸ್ಥಾಪನೆಯ

ನಿಮಿತ್ತ ಆತ್ಮರಾಗಿದ್ದೀರಿ. ನಾವಂತೂ ಇನ್ನೂ ಹೊಸಬರು. ನಾವಂತೂ ಇನ್ನೂ ಚಿಕ್ಕವರು ಎಂದು ಯೋಚಿಸಬೇಡಿ. ಆದರೆ ಸಮಯದನುಸಾರ ಯಾವಾಗ ಸಮಯದ ಸಮಾಪ್ತಿಯು ಸಮೀಪವಿರುತ್ತದೆಯೋ ಆಗ ಚಿಕ್ಕವರಿಗೆ, ಹೊಸಬರಿಗೆ ಬಹಳ ತೀವ್ರ ಪುರುಷಾರ್ಥವನ್ನು ಮಾಡಲೇಬೇಕಾಗುತ್ತದೆ. ಒಂದುವೇಳೆ ಬ್ರಾಹ್ಮಣರಾಗಿದ್ದರೆ ಇಷ್ಟು ತೀವ್ರ ಪುರುಷಾರ್ಥವನ್ನು ಮಾಡಿರಿ. ಒಂದುವೇಳೆ ಕ್ಷತ್ರಿಯರಾಗಿದ್ದರೆ ನಿಮಗೆ ಚುಟ್ಟಿ (ಬಿಡುಗಡೆ) ಇದೆ. ಆದರೆ ಬ್ರಾಹ್ಮಣರಾಗಿದ್ದರೆ ಬ್ರಾಹ್ಮಣ ಸೋ ದೇವತಾ ಎಂದು ಹೇಳಲಾಗುತ್ತದೆ. ಕ್ಷತ್ರಿಯ ಸೋ ದೇವತಾ ಎಂದು ಹೇಳುವುದಿಲ್ಲ. ಬ್ರಾಹ್ಮಣ ಆತ್ಮರಿಗೆ ಸ್ಥಾಪನೆಯ ನಿಮಿತ್ತರಾಗಲೇಬೇಕು. ನಿಮಿತ್ತರಾಗಿಯೇ ಇದ್ದೀರಿ ಆದ್ದರಿಂದ ಈಗ ಮಾಸ್ಟರ್ ದಾತಾ ಆಗಿರಿ. ದಾನ ಮಾಡಬೇಡಿ ಆದರೆ ಸಹಯೋಗ ಕೊಡಿ. ಬ್ರಾಹ್ಮಣ, ಬ್ರಾಹ್ಮಣರಿಗೆ ದಾನ ಕೊಡಲು ಸಾಧ್ಯವಿಲ್ಲ, ಸಹಯೋಗ ಕೊಡಬಹುದು. ಅಂದಮೇಲೆ ಏನು ಹೇಳಿದಿರಿ? ಮಹಾದಾತ ಹಾಗೂ ಮಹಾಸಹಯೋಗಿ ಆಗಿರಿ. ಈಗ ಒಂದು ವರ್ಷದವರಾಗಿದ್ದರು ಸಹ ಸಮಯಾನುಸಾರ ಬಾಲ್ಯದ ಮಾತುಗಳನ್ನು ಸಮಾಪ್ತಿ ಮಾಡಿರಿ. ಏಕೆಂದರೆ ನೀವೆಲ್ಲಾ ಮಕ್ಕಳು ವಾನಪ್ರಸ್ಥ ಅವಸ್ಥೆಯ ಸಮೀಪ ಇದ್ದೀರಿ. ಸಮಯದ ಗತಿಯ ಪ್ರಮಾಣ, ಡ್ರಾಮಾದ ನಿಯಮ ಪ್ರಮಾಣ ಈಗ ಎಲ್ಲರ ವಾನಪ್ರಾಸ್ತ ಅವಸ್ಥೆ ಸಮೀಪವಿದೆ.

ಬಾಪ್‌ದಾದಾರವರು ತಿಳಿದಿದ್ದಾರೆ- ಮಕ್ಕಳಿಗೆ ತಂದೆಯ ಮೇಲೆ ಹೃದಯದ ಸ್ನೇಹವಿದೆ. ಹೃದಯದ ಸ್ನೇಹ ಇದೆ ಅಲ್ಲವೇ? ಅಥವಾ ಮೇಲೆ ಮೇಲೆ( ತೋರ್ಪಡಿಕೆಯ) ಪ್ರೀತಿ ಇದೆಯೋ? ಹೃದಯದ ಸ್ನೇಹವಿದೆ, ಆದ್ದರಿಂದಲೇ ಓಡೋಡಿ ಬಂದಿದ್ದೀರಿ ಅಲ್ಲವೇ? ನೋಡಿ ಬೇಹದ್ದಿನ ಹಾಲ್ ನಲ್ಲಿ, ಬೇಹದ್ದಿನ ತಂದೆಯ ಮಕ್ಕಳು, ಬೇಹದ್ದಿನ ರೂಪದಲ್ಲಿ ವಿರಾಜಮಾನರಾಗಿದ್ದಾರೆ. ಈ ಹಾಲ್ ಇಷ್ಟವಾಗುತ್ತದೆಯೇ ಅಥವಾ ದೂರ ಎನಿಸುತ್ತದೆಯೇ? ನೋಡಿ, ಕುಳಿತುಕೊಳ್ಳುವುದರಲ್ಲಂತೂ ದೂರವಿದ್ದಿರಿ ಆದರೆ ಬಾಪ್‌ದಾದಾರವರ ಹೃದಯದ ಸ್ಕ್ರೀನ್ (ಪರದೆ) ಬಹಳ ದೊಡ್ಡದಾಗಿದೆ. ಇನ್ನುವರೆಗೂ ಸೈನ್ಸ್ ನವರು ಸಹ ಇಂತಹ ಸ್ಕ್ರೀನ್ ತಯಾರು ಮಾಡಿಲ್ಲ. ಆದ್ದರಿಂದ ನೀವು ದೂರ ಕುಳಿತಿಲ್ಲ, ಬಾಪ್‌ದಾದಾರವರ ಹೃದಯದಲ್ಲಿ ಕುಳಿತಿದ್ದೀರಿ. ಈ ರೀತಿ ತಿಳಿಯುತ್ತೀರಾ? ಕುರ್ಚಿಯ ಮೇಲೆ ಕುಳಿತಿದ್ದೀರಾ, ಕೆಳಗೆ ಕುಳಿತಿದ್ದೀರಾ ಅಥವಾ ಹೃದಯದಲ್ಲಿ ಕುಳಿತಿದ್ದೀರಾ? ದೃಶ್ಯವಂತೂ ಬಹಳ ಒಳ್ಳೆಯದು ಸುಂದರ ಎನಿಸುತ್ತದೆ. ಸಂಪೂರ್ಣ ಹಿಂದಿನವರೆಗೂ ತುಂಬಿದೆಯೇ ಅಥವಾ ಸ್ವಲ್ಪ ಖಾಲಿ ಇದೆಯೇ? ಬಾಪ್‌ದಾದಾರವರು ನೋಡುತ್ತಿದ್ದರು ಸ್ವಲ್ಪ ಹಿಂದೆ ಕಾಲಿ ಇದೆ.

ನೋಡಿ ಬಾಪ್‌ದಾದಾರವರು ನಿಮಗೆ ಒಂದು ಕಾರ್ಯವನ್ನು ಕೊಟ್ಟಿದ್ದರು. ನೀವು ಮರೆತಿರಬಹುದು ಆದರೆ ಬಾಪ್‌ದಾದಾರವರಿಗೆ ನೆನಪಿದೆ. ಯಾವ ಕಾರ್ಯ ಕೊಟ್ಟಿದ್ದರು? (ಕ್ರೋಧ ಮುಕ್ತರಾಗುವ ಕಾರ್ಯ) ಇಂದು ಅದನ್ನು ಕೇಳುವುದಿಲ್ಲ. ಮೊದಲನೆಯ ಚಾನ್ಸ್ ತೆಗೆದುಕೊಂಡಿದ್ದಾರಲ್ಲವೇ, ಇಂದು ಕ್ರೋಧ ಮುಕ್ತ ಆಗಿದ್ದೀರಾ ಎಂದು ಕೇಳಿದರೆ ಹೃದಯ ವಿಧೀರ್ಣರಾಗುವರು. ಬಾಪ್‌ದಾದಾರವರಿಗೆ ಫಲಿತಾಂಶ ಗೊತ್ತಿದೆ. ಕೇಳುವರು. ನಿಮ್ಮಿಂದಲೂ ಸಹ ಅಲ್ಲಿಂದ ಫಲಿತಾಂಶವನ್ನು ತರಿಸುವರು. ಇಂದು ಅದನ್ನು ಬಿಟ್ಟುಬಿಡೋಣ. ಕೆಲಸ ಕೊಟ್ಟಿದ್ದರು- 9 ಲಕ್ಷ ತಯಾರು ಮಾಡಿ ತೋರಿಸಿ ಎಂದು. ನೆನಪಿದೆಯೇ, ಪ್ರತಿ ಜೋನಿನವರಿಗೂ ಹೇಳಿದ್ದರು, ಯಾವ ಜೋನಿನವರು 9 ಲಕ್ಷ ತಯಾರು ಮಾಡಿದ್ದೀರಿ?

ಬೆಂಗಾಲ್-ಬಿಹಾರ ಅವರ ಸೇವೆಯ ಟರ್ನ್ ಆಗಿದೆ. ಬೇಂಗಾಲ್- ಬಿಹಾರಿನವರು 9 ಲಕ್ಷವನ್ನು ತಯಾರು ಮಾಡಿದ್ದೀರಾ? ಸುಮ್ಮನಿದ್ದಾರೆ, ಮಾತನಾಡುತ್ತಿಲ್ಲ. ಹೋಗಲಿ ಒಂದು ಜೋನ್ ಅಲ್ಲ, ಎಲ್ಲಾ ಜೋನ್, ದೇಶ ವಿದೇಶದವರು ಸೇರಿಕೊಂಡು 9 ಲಕ್ಷವನ್ನು ತಯಾರು ಮಾಡಿದ್ದೀರಾ? ವಿದೇಶದವರು ಹೇಳಿರಿ. 9 ಲಕ್ಷ ಇದ್ದೀರಾ? ಬಾಪ್‌ದಾದಾರವರಂತೂ ತಮ್ಮ ದಿನಾಂಕವನ್ನು ನಿಗದಿ ಮಾಡುತ್ತಾರೆ ಹಾಗೂ ಆ ದಿನದಂದೇ ಬರುತ್ತಾರೆ. ನೀವು ಸಹ ಎಲ್ಲಾ ವಿಷಯಗಳ ದಿನಾಂಕವನ್ನು ನಿಗದಿ ಮಾಡುತ್ತೀರಾ? ಈ ಹಾಲ್ ಎಂದು ತಯಾರಾಗುವುದು, ಕಾರ್ಯಕ್ರಮವನ್ನು ಯಾವಾಗ ಮಾಡುವುದು, ಇದರ ದಿನಾಂಕಗಳನ್ನು ನಿಗದಿ ಮಾಡುತ್ತೀರಿ ಅಲ್ಲವೇ? ಅಂದಮೇಲೆ ಇದರ ದಿನಾಂಕ ಎಂದು ನಿಗದಿ ಮಾಡಿದ್ದೀರಿ? ನಿಗದಿ ಮಾಡಿದ್ದೀರಾ? ವಿನಾಶದ ಅಂತಿಮದಲ್ಲಿಯೇ ಅಥವಾ ಮೊದಲೇ? ಏನಾಗುವುದು? ಏನು ಯೋಚಿಸಿದ್ದೀರಿ? ಯಾವ ದಿನಾಂಕವಾಗಿದೆ? ಯಾವುದಾದರು ದಿನಾಂಕ ಇದೆಯೇ ಅಥವಾ ಇದುವರೆಗೂ ನಿಗದಿ ಮಾಡಿಲ್ಲವೇ? ಇದು ಸಹ ತಂದೆಯೇ ಮಾಡಬೇಕೇ. ನೀವೇ ಮಾಡಬೇಕು. ಬಾಪ್‌ದಾದಾರವರಂತೂ ಹೇಳುತ್ತಾರೆ ಶುಭ ಕಾರ್ಯದಲ್ಲಿ ತಡಮಾಡಬೇಡಿರಿ, ಅಂದಮೇಲೆ ಏನು ಮಾಡುವಿರಿ? ನಡೆಯಿರಿ, ಈ ಸೀಸನ್ನಿನ ಅಂತ್ಯದವರೆಗೆ ಆದರೂ ಒಳ್ಳೆಯದು. ಇಷ್ಟು ಧೈರ್ಯ ಇದೆಯೇ? ಕೇವಲ ದಾತಾ ಆಗಿ. ಒಂದುವೇಳೆ ದಾತಾ ಆದರೆ ದಾತಾತನದ ಭಾವನೆಯಿಂದ ನಿಮ್ಮ ರಾಯಲ್ ಫ್ಯಾಮಿಲಿ ಹಾಗೂ ಸಮೀಪದ ಪ್ರಜೆಗಳು ಬಹಳ ಬೇಗ ತಯಾರಾಗುವರು. ಅವರಂತೂ ಕಾಯುತ್ತಿದ್ದಾರೆ, ಕೇವಲ ಸದಾ ದಾತಾ ಆಗುವ ಅವಶ್ಯಕತೆ ಇದೆ. ಮಹಾನ್ ಸಹಯೋಗಿ ಆಗುವ ಅವಶ್ಯಕತೆ ಇದೆ. **ಬಹಳ ಖಜಾನೆಗಳನ್ನು ಸ್ವಯಂನಪ್ರತಿ ಹಾಗೂ ಕೇವಲ ಸ್ವಯಂನ ಸೇವೆಗಳ ಪ್ರತಿ ತೊಡಗಿಸುತ್ತಿದ್ದೀರಿ. ತಮ್ಮ ತಮ್ಮ ಸೇವೆಗಳ ಕರ್ತವ್ಯದಲ್ಲಿ ಬಹಳ ಸಮಯವನ್ನು ತೊಡಗಿಸುತ್ತಿದ್ದೀರಿ. ಮಹಾದಾತ ಆಗಿ, ಬೇಹದ್ದಿನ ದಾತಾ ಆಗಿ ವಿಶ್ವದ ಗ್ಲೋಬ್ ನ ಮೇಲೆ ನಿಂತುಕೊಳ್ಳಿರಿ, ಬೇಹದ್ದಿನ ಸೇವೆಯಲ್ಲಿ ತರಂಗಗಳನ್ನು ಹರಡಿಸಿರಿ. ವಿಶ್ವದ ರಾಜರಾಗಬೇಕು ಜೋನಿನ ಅಥವಾ ತಮ್ಮ ತಮ್ಮ ಕರ್ತವ್ಯದ ಗೆರೆಯೊಳಗಿನ ರಾಜರಲ್ಲ. ವಿಶ್ವಕಲ್ಯಾಣಕಾರಿ ಆಗಿದ್ದೀರಿ. ಈಗ ಬೇಹದ್ದಿನಲ್ಲಿ ಹೋಗಿ. ಬೇಹದ್ದಿನಲ್ಲಿ ಹೋಗುವುದರಿಂದ ಹದ್ದಿನ ಮಾತುಗಳು ಸ್ವತಹವಾಗಿಯೇ ಸಮಾಪ್ತಿಯಾಗುವುದು. ಮನೋಬಲ ಬಹಳ ಶ್ರೇಷ್ಠ ಬಲವಾಗಿದೆ, ಅದನ್ನು ಬಳಸುವುದಿಲ್ಲ. ವಾಣಿ, ಸಂಬಂಧ, ಸಂಪರ್ಕದ ಸೇವೆಗಳಲ್ಲಿ ವ್ಯಸ್ತರಾಗಿರುತ್ತೀರಿ.** ಈಗ ಮನೋಬಲವನ್ನು ಹೆಚ್ಚಿಸಿಕೊಳ್ಳಿ. ಬೇಹದ್ದಿನ ಸೇವೆ ಯಾವುದು? ನೀವು ಈಗ ತಮ್ಮ ವಾಣಿ ಅಥವಾ ಸಂಬಂಧ, ಸಹಯೋಗದಿಂದ ಮಾಡುತ್ತೀರಿ, ಅದನ್ನು ಮನೋಬಲದಿಂದ ಮಾಡಿ. ಒಂದುವೇಳೆ ಮನೋಬಲದ ಬೇಹದ್ದಿನ ಸೇವೆ ಯನ್ನು ನೀವು ಬೇಹದ್ದಿನ ವೃತ್ತಿಯಿಂದ, ಮನೋಬಲದ ಮುಖಾಂತರ ವಿಶ್ವದ ಗ್ಲೋಬ್ನ ಮೇಲೆ ಶ್ರೇಷ್ಠ ಸ್ಥಿತಿಯಲ್ಲಿ ಸ್ಥಿತರಾಗಿ, ತಂದೆಯ ಜೊತೆ ಪರಮಧಾಮದ ಸ್ಥಿತಿಯಲ್ಲಿ ಸ್ವಲ್ಪ ಸಮಯವೂ ಸ್ಥಿತರಾಗಿ ಈ ಸೇವೆ ಮಾಡಿದರೆ ನಿಮಗೆ ಇದರ ಪ್ರಾಲಬ್ಧ ಬಹಳಷ್ಟು ಪಟ್ಟು ಸಿಗುತ್ತದೆ.

ಇಂದಿನ ಸಮಯ ಹಾಗೂ ಸಂದರ್ಭದ ಪ್ರಮಾಣ ಅಂತಿಮ ಸೇವೆ ಮನಸಾ ಅಥವಾ ಮನೋಬಲದ ಸೇವೆಯಾಗಿದೆ. ಇದರ ಅಭ್ಯಾಸವನ್ನು ಈಗಿನಿಂದಲೇ ಮಾಡಿ. ವಾಣಿಯಿಂದಾಗಲಿ, ಸಂಬಂಧ ಸಂಪರ್ಕದಿಂದಾಗಲಿ ಸೇವೆ ಮಾಡುತ್ತೀರಿ ಆದರೆ ಈ ಮನಸಾ ಸೇವೆಯ ಅಭ್ಯಾಸವು ಅತಿ ಅವಶ್ಯಕವಾಗಿದೆ, ಜೊತೆ ಜೊತೆ ಇದರ ಅಭ್ಯಾಸವನ್ನು ಮಾಡುತ್ತಾ ನಡೆಯಿರಿ. ತಿಳಿಯಿತೇ ಏನು ಮಾಡಬೇಕು ಎಂದು? ಈ ಮನಸಾ ಸೇವೆಯು ಅದೇ ಅದ್ಭುತವನ್ನು ತೋರಿಸುತ್ತದೆ.

ಸ್ಥಾಪನೆಯ ಆದಿಯ ಸಮಯದಲ್ಲಿ ತಂದೆಯು ಮನಸಾ ಮುಖಾಂತರ ಆತ್ಮಿಕ ಆಕರ್ಷಣೆಯಿಂದ ಮಕ್ಕಳನ್ನು ಆಕರ್ಷಣೆ ಮಾಡಿದರು. ಹಾಗೂ ಮನಸಾ ಸೇವೆಯ ಫಲ ಸ್ವರೂಪ ಈಗಲೂ ಸಹ ನೋಡುತ್ತಿರುವಿರಿ ಅದೇ ಆತ್ಮರು ಈಗಲೂ ಸಹ ಅಡಿಪಾಯವಾಗಿದ್ದಾರೆ. ಡ್ರಾಮಾನುಸಾರ ಇದು ತಂದೆಯ ಮನಸಾ ಆಕರ್ಷಣೆಯ ಸಾಕ್ಷಿಯಾಗಿದೆ- ಆ ಮಕ್ಕಳು ಎಷ್ಟು ಪಕ್ಕಾ ಆಗಿದ್ದಾರೆ. ಎಂದ ಮೇಲೆ ಅಂತ್ಯದಲ್ಲೂ ಸಹ ಈಗ ತಂದೆಯ ಜೊತೆ ನಿಮ್ಮ ಮನಸಾ ಆಕರ್ಷಣೆಯು, ಆತ್ಮಿಕ ಆಕರ್ಷಣೆ ಸಹ ಯಾವ ಆತ್ಮರು ಬರುತ್ತಾರೆಯೋ ಅವರು ಸಮಯಾನುಸಾರ ಕಡಿಮೆ ಸಮಯ, ಕಡಿಮೆ ಪರಿಶ್ರಮ ಹಾಗೂ ಬ್ರಾಹ್ಮಣ ಪರಿವಾರದಲ್ಲಿ ವೃದ್ಧಿ ಮಾಡುವುದಕ್ಕಾಗಿ ನಿಮಿತ್ತರಾಗುತ್ತಾರೆ. ಅದೇ ಮೊದಲಿನಂತಹ ಸ್ಥಿತಿಯನ್ನು ಅಂತ್ಯದಲ್ಲಿಯೂ ನೋಡುವಿರಿ. ಹೇಗೆ ಆದಿಯಲ್ಲಿ ಬ್ರಹ್ಮಾ ತಂದೆಯನ್ನು ಸಾಧಾರಣ ಎಂದುಕೊಳ್ಳದೇ ಶ್ರೀಕೃಷ್ಣನ ರೂಪದಲ್ಲಿ ಅನುಭವ ಮಾಡುತ್ತಿದ್ದರು. ಸಾಕ್ಷಾತ್ಕಾರ ಬೇರೆಯ ಮಾತಾಗಿದೆ ಆದರೆ ಸಾಕ್ಷಾತ್ ಸ್ವರೂಪದಲ್ಲಿ ಶ್ರೀಕೃಷ್ಣನನ್ನೇ ನೋಡುತ್ತಿದ್ದರು, ತಿನ್ನುತ್ತಾ- ಕುಡಿಯುತ್ತಾ ನಡೆದಾಡುತ್ತಾ. ಈ ರೀತಿ ನೋಡಿದಿರಲ್ಲವೇ? ಸ್ಥಾಪನೆಯಲ್ಲಿ ಒಬ್ಬ ತಂದೆ ಮಾಡಿದರು, ಅಂತ್ಯದಲ್ಲಿ ನೀವು ಮಕ್ಕಳು ಸಹ ಆತ್ಮರ ಮುಂದೆ ಸಾಕ್ಷಾತ್ ದೇವಿ - ದೇವತೆಯಾಗಿ ಕಂಡುಬರುವಿರಿ. ಅವರು ನಿಮ್ಮನ್ನು ಸಾಧಾರಣ ಎಂದು ತಿಳಿಯುವುದೇ ಇಲ್ಲ. ಅದೇ ಪೂಜ್ಯತನದ ಪ್ರಭಾವವನ್ನು ಅನುಭವ ಮಾಡುವರು, ಆಗ ತಂದೆಯ ಸಹಿತ ಎಲ್ಲರ ಪ್ರತ್ಯಕ್ಷತೆಯ ಪರದೆ ತೆರೆಯುವುದು. ಈಗ ತಂದೆ ಒಬ್ಬರನ್ನೇ ಮಾಡುವುದಲ್ಲ, ಮಕ್ಕಳ ಜೊತೆ ತಂದೆ ಪ್ರತ್ಯಕ್ಷವಾಗಬೇಕು. ಹೇಗೆ ಸ್ಥಾಪನೆಯಲ್ಲಿ ಬ್ರಹ್ಮಾನ ಜೊತೆಯಲ್ಲಿ ವಿಶೇಷ ಬ್ರಾಹ್ಮಣರು ಸಹ ಸ್ಥಾಪನೆಯ ನಿಮಿತ್ತರಾದರು, ಇದೇ ರೀತಿ ಸಮಾಪ್ತಿಯ ಸಮಯದಲ್ಲಿಯೂ ಸಹ ತಂದೆಯ ಜೊತೆ ಅನನ್ಯ ಮಕ್ಕಳು ಸಹದೇವ ರೂಪದಲ್ಲಿ ಸಾಕ್ಷಾತ್ ಅನುಭವ ಆಗುವರು. ಇದಕ್ಕಾಗಿ ಇಂದು ಏನು ಹೇಳಿದೆವು, ಈಗಿನಿಂದಲೇ ಪ್ರಾಲಬ್ಧ ಸ್ವರೂಪದ ಸ್ಥಿತಿಯಲ್ಲಿ ಸ್ಥಿತರಾಗಿ. ಚಿಕ್ಕ ಚಿಕ್ಕ ಮಾತುಗಳನ್ನು ಬಿಟ್ಟುಬಿಡಿ, ಈಗ ಮೇಲೆ ಏಳಿ, ಶ್ರೇಷ್ಠ ಸ್ಥಿತಿಯನ್ನು ಪಡೆದುಕೊಳ್ಳಿರಿ. ವಿಶೇಷ ಪ್ರಾಲಬ್ಧದ ಸ್ವರೂಪದ ಸಾಕ್ಷಾತ್ಕಾರವನ್ನು ಸ್ವಯಂ ಮಾಡಿ ಹಾಗೂ ಅನ್ಯರಿಗೂ ಮಾಡಿಸಿ. ತಿಳಿಯಿತೇ? ಈಗ ಎಲ್ಲರೂ ತಮ್ಮ ಆನಂದ ಸ್ವರೂಪದಲ್ಲಿ ಒಂದು ಸೆಕೆಂಡಿಗಾಗಿ ಸ್ಥಿತರಾಗಲು ಸಾಧ್ಯವೇ? ಏಕೆಂದರೆ ಅಂತ್ಯದಲ್ಲಿ ಒಂದು ಸೆಕೆಂಡಿನ ಸಿಟಿ ಹೊಡೆಯಲಾಗುತ್ತದೆ. ಈಗಿನಿಂದಲೇ ಇದರ ಅಭ್ಯಾಸ ಮಾಡಿ. ಕೇವಲ ಈ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. (ಡ್ರಿಲ್ ಮಾಡಿಸಿದರು) ಒಳ್ಳೆಯದು. ಎಲ್ಲರೂ ವಿಶ್ರಾಂತಿಯಿಂದ ಇದ್ದೀರಲ್ಲವೇ? ಶಾಂತಿವನ ಚೆನ್ನಾಗಿದೆಯೇ? ಎಲ್ಲರಿಗೂ ಇಷ್ಟವಾಗಿದೆ. ಡಬಲ್ ವಿದೇಶಿಯರು ಕೈಯನ್ನೆತ್ತಿರಿ ಡಬಲ್ ವಿದೇಶಿಯರಿಗೆ ಡಬಲ್ ಸಂತೋಷವಿದೆಯಲ್ಲವೇ? ಅಥವಾ ಪದಮಾಪದಮ್ ಇದೆಯೇ? ವಿದೇಶದಲ್ಲಿ ಆದರೆ ಕೇಳುತ್ತಿರುವಿರಲ್ಲವೇ. ಎಲ್ಲಾ ದೇಶಗಳಲ್ಲಿ ಕೇಳುತ್ತಿದ್ದೀರಿ. (ಸ್ಯಾಟಿಲೈಟ್, ಇಂಟರ್ನೆಟ್ ನಿಂದ 50 ದೇಶಗಳಿಗಿಂತ ಹೆಚ್ಚು ದೇಶಗಳಲ್ಲಿ ಡೈರೆಕ್ಟ್ ಬಾಪ್‌ದಾದಾರವರ ಮುರಳಿಯನ್ನು ಕೇಳುತ್ತಿದ್ದಾರೆ) ನೋಡಿರಿ ವಿದೇಶಿಯರ ಆವಿಷ್ಕರಣೆ ಮೊದಲು ವಿದೇಶಕ್ಕೆ ಉಪಯೋಗಪಡುತ್ತಿದೆ. ವಿದೇಶಿಯರು ಬಾಪ್‌ದಾದಾರವರನ್ನು ಪ್ರತ್ಯಕ್ಷ ಮಾಡುವುದರಲ್ಲಿ ಸಹಯೋಗಿಯಾಗಿದ್ದಾರೆ. ಇನ್ನೂ ಮುಂದೆ ಕೂಡ ಆಗುತ್ತಾರೆ. ಬುದ್ಧಿಯಿಂದ ಚೆನ್ನಾಗಿ ಯೋಚಿಸುತ್ತಾರೆ. ಆವಿಷ್ಕರಣೆ ಚೆನ್ನಾಗಿ ಪ್ರಾರಂಭ ಮಾಡಿದ್ದಾರೆ ಆದ್ದರಿಂದಲೇ ಮೊದಲ ಅವಕಾಶ ನಿಮಗೆ ಲಭಿಸಿದೆ. ಎಲ್ಲರೂ ಅವರವರ ದೇಶಗಳಲ್ಲಿ ಕೇಳುತ್ತಿದ್ದಾರೆ. ಬಾಪ್‌ದಾದಾ ಮಕ್ಕಳೆಲ್ಲರನ್ನು ಈ ಸಭೆಯಲ್ಲಿ ಪರಿಶ್ತಾಸ್ವರೂಪದಲ್ಲಿ ನೋಡುತ್ತಿದ್ದಾರೆ. ಡಬಲ್ ಸಭೆಯನ್ನು ನೋಡುತ್ತಿದ್ದಾರೆ. ಒಂದು ಸಾಕಾರ ಸಭೆ ಮತ್ತು ಎರಡು ಫರಿಶ್ತಾ ಸಭೆ. ಭಾರತ ದೇಶದಲ್ಲಿ ಕೂಡ ನಾಲ್ಕು ಕಡೆಯ ಮಕ್ಕಳು ಈ ಸಮಯದಲ್ಲಿ

ಫರಿಶ್ತಾ ರೂಪದಲ್ಲಿ ಶಾಂತಿವನಕ್ಕೆ ತಲುಪಿದ್ದಾರೆ. ಸಾಕಾರ ರೂಪಧಾರಿ ಮಕ್ಕಳಿಗೆ ಮೊದಲು ಲೆಕ್ಕವಿಲ್ಲದಷ್ಟು ಪ್ರಿಯಸ್ಮೃತಿಗಳನ್ನು ಕೊಡುತ್ತಿದ್ದಾರೆ. ಬಾಪ್‌ದಾದಾ ನೋಡುತ್ತಿದ್ದಾರೆ ಮಕ್ಕಳು ಶಾಂತಿವನ ನಿವಾಸಿಯಾಗಿ ಅವ್ಯಕ್ತ ಅನುಭವ ಮಾಡಿಕೊಳ್ಳುತ್ತಿದ್ದಾರೆ. ಬಹಳ ಒಳ್ಳೆಯ ಸಾಧನಗಳು ಲಭಿಸಿವೆ. ಸಾಧನ ಮತ್ತು ಸಾಧನೆಗಳು ಎರಡೂ ಜೊತೆ ಜೊತೆ ಇರಬೇಕು. ಒಳ್ಳೆಯದು.

**ಸರ್ವ ನಾಲ್ಕಾರು ಕಡೆಯ ಮಕ್ಕಳಿಗೆ, ಸದಾ ಭಾಗ್ಯದ ರೇಖೆಯ ಪ್ರತ್ಯಕ್ಷ ರೂಪ ಸ್ಮೃತಿಯಲ್ಲಿ ಇರುವಂತಹ ಆತ್ಮರಿಗೆ, ಸದಾ ಸಂಗಮಯುಗೀ ಸರ್ವ ಪ್ರಾಪ್ತಿ ಸ್ವರೂಪ ಪ್ರಾಲಬ್ಧವನ್ನು ಅನುಭವ ಮಾಡುವಂತಹ, ಸದಾ ಮಾಸ್ಟರ್ ದಾತ, ಮಹಾ ಸಹಯೋಗಿ ಆತ್ಮರಿಗೆ, ಸದಾ ಮನಸಾ ಸೇವೆಯ ಮುಖಾಂತರ ವಿಶ್ವದ ಆತ್ಮರ ಕಲ್ಯಾಣಕಾರಿ ಆತ್ಮರಿಗೆ, ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 13-11-1997.

***ಸಂಗಮ ಯುಗದ ಪ್ರಾಪ್ತಿಗಳ ಪ್ರಾರಬ್ಧದ ಅನುಭವ ಮಾಡಿ ಮಾಸ್ಟರ್ ದಾತ, ಮಹಾ ಸಹಯೋಗಿಯಾಗಿರಿ.***

ನಿಮ್ಮ ಬಳಿ ಖಜಾನೆ ಇದೆಯೇ? ಸಂಪನ್ನವಾಗಿದೆಯೇ? ಗುಣಗಳಿಂದ ಸಂಪನ್ನವಾಗಿದೆಯೇ, ಶಕ್ತಿಗಳಿಂದ ಸಂಪನ್ನವಾಗಿದೆಯೇ? ಮತ್ತೆ ಏಕೆ ಕೊಡುತ್ತಿಲ್ಲ ತಮಗಾಗಿ ಬಚ್ಚಿಟ್ಟುಕೊಂಡಿದ್ದೀರಾ? ಖಜಾನೆಗಳಿಂದ ಸಂಪನ್ನರಾದ ಮೇಲೆ ಕೊಡುತ್ತಾ ಹೋಗಿರಿ. ಇವರು ಏಕೆ ಮಾಡುತ್ತಾರೆ, ಇವರು ಏಕೆ ಹೇಳುತ್ತಾರೆ? ಇಂತಹ ಯೋಚನೆ ಮಾಡಬೇಡಿರಿ. ತಯಾರಾಗಿ ತಮ್ಮ ಗುಣಗಳ, ತಮ್ಮ ಶಕ್ತಿಗಳ ಸಹಯೋಗವನ್ನು ಕೊಡಿ. ಇದಕ್ಕೇ ಮಾಸ್ಟರ್ ದಾತ, ಮಹಾಸಹಯೋಗಿ ಎಂದು ಕರೆಯಲಾಗುತ್ತದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನನ್ನ ನಯನಗಳಲ್ಲಿ ಸ್ನೇಹ ಮತ್ತು ಶಕ್ತಿಯ ರೇಖೆ, ಬಾಯಲ್ಲಿ ಶ್ರೇಷ್ಠ ಮಧುರ ವಾಣಿ, ತುಟಿಗಳ ಮೇಲೆ ಆತ್ಮಿಕ ಮುಗುಳ್ನಗೆ& ಆತ್ಮಿಕ ಸಂತೋಷದ ರೇಖೆ, ಹೃದಯದಲ್ಲಿ ಹೃದಯ ರಾಮನ ಪ್ರೀತಿಯಲ್ಲಿ ಲವಲೀನ ವಾಗಿರುವ ರೇಖೆ, ಕೈಗಳಲ್ಲಿ ಸರ್ವಖಜಾನೆಗಳ ಸಂಪನ್ನತೆ, ಪಾದಗಳಲ್ಲಿ ಪ್ರತಿ ಹೆಜ್ಜೆಯಲ್ಲಿ ಪದಮದ ಸಂಪಾದನೆಯ ರೇಖೆಯು ಸ್ಪಷ್ಟವಾಗಿ ಕಾಣಿಸುತ್ತಿದೆ.

2. ನಾನು ಪುರುಷಾರ್ಥದಿಂದ ಶ್ರೇಷ್ಠ ಕರ್ಮಗಳಿಂದ 21 ಜನ್ಮಗಳು ಸಂಪನ್ನವಾಗಿ ಮತ್ತು ಸುಖಿಯಾಗಿ ಇರುವ ರೇಖೆ ಮತ್ತು ದ್ವಾಪರ, ಕಲಿಯುಗದಲ್ಲಿ ಕೂಡ ಪೂಜ್ಯರಾಗುವ ರೇಖೆಯನ್ನು ಎಳೆದುಕೊಂಡಿದ್ದೇನೆ.

3. ನನ್ನ ಭಾಗ್ಯರೇಖೆ ಸದಾ ಸ್ಮೃತಿಯಲ್ಲಿ ಪ್ರತ್ಯಕ್ಷವಾಗಿ ಇದೆ.

4. ನಾನು ಸಂಗಮ ಯುಗದಲ್ಲಿ ಸರ್ವಶಕ್ತಿ ಸಂಪನ್ನವಾಗಿ, ಸರ್ವ ಜ್ಞಾನ ಸಂಪನ್ನವಾಗಿ, ಸರ್ವ ವಿಘ್ನ ವಿನಾಶಕ ಮೂರ್ತಿಯಾಗಿ ಪ್ರಾಪ್ತಿಗಳ ಪ್ರಾರಬ್ಧವನ್ನು ಅನುಭವ ಮಾಡುವ ಪ್ರಾರಬ್ಧ ಸ್ವರೂಪ.

5. ಇವರು ಇದನ್ನು ಮಾಡಿದರೆ ಹೀಗಿರುತ್ತಿತ್ತು, ಇವರು ಬದಲಾದರೆ ನಾನು ಬದಲಾಗುತ್ತೇನೆ, ಇವರು ಹೀಗಿದ್ದರೆ ನಾನು ಇರುತ್ತೇನೆ, ಹೀಗೆ ತೆಗೆದುಕೊಳ್ಳುವ ಭಾವನೆಯನ್ನು ಇಡದೇ ನಾನು ತರಂಗಗಳನ್ನು, ಗುಣಗಳ ಸಹಯೋಗ, ಶಕ್ತಿಯ ಸಹಯೋಗ ಕೊಡುವ ಮಾಸ್ಟರ್ ದಾತ, ಮಹಾಸಹಯೋಗಿ.

6. ನಾನು ತೀವ್ರ ಪುರುಷಾರ್ಥ ಮಾಡುವ ಬ್ರಾಹ್ಮಣನು.

7. ನಾನು ಬ್ರಾಹ್ಮಣನಿಂದ ದೇವತೆಯಾಗುತ್ತೇನೆ. (ಕ್ಷತ್ರಿಯರಿಂದ ದೇವತೆ ಎಂದು ಹೇಳುವುದಿಲ್ಲ ಆದ್ದರಿಂದ ಯುದ್ಧವನ್ನು ಮಾಡುವವರಾಗಬಾರದು).

8. ನಾನು ವಾಣಿಯಿಂದ, ಸಂಬಂಧ ಸಂಪರ್ಕಗಳಿಂದ, ಸೇವೆಗಿಂತಲೂ ಬೇಹದ್ ವೃತ್ತಿಯಿಂದ, ಮನೋಬಲದಿಂದ ನಾನು ಮಹಾದಾತನಾಗಿ, ಬೇಹದ್ ಧಾತನಾಗಿ ವಿಶ್ವದ ಗ್ಲೋಬ್ ನ ಮೇಲೆ ಉನ್ನತ ಸ್ಥಿತಿಯಲ್ಲಿದ್ದು, ತಂದೆಯೊಂದಿಗೆ ಪರಂಧಾಮದ ಸ್ಥಿತಿಯಲ್ಲಿದ್ದು ತರಂಗಗಳನ್ನು ವ್ಯಾಪಿಸುವ ವಿಶ್ವಕಲ್ಯಾಣಕಾರಿಯಾಗಿದ್ದೇನೆ.

9. ಆದಿಯಲ್ಲಿ ಬ್ರಹ್ಮಾ ತಂದೆ ಶ್ರೀ ಕೃಷ್ಣನಂತೆ ಹೇಗಾದರೆ ಅನುಭವವಾದರೋ ಅಂತಿಮದಲ್ಲಿ ನಾನು ಕೂಡ ಆತ್ಮರ ಮುಂದೆ ಸಾಕ್ಷಾತ್ ದೇವಿ ದೇವತೆಯಾಗಿ ಅನುಭವವಾಗಿದ್ದೇನೆ.

10. ನನ್ನ ವಿಶೇಷ ಪ್ರಾರಬ್ಧ ಸ್ವರೂಪವನ್ನು ಸ್ವಯಂ ಕೂಡ ಅನುಭವ ಮಾಡಿಕೊಂಡಿದ್ದೇನೆ ಮತ್ತು ಇತರರಿಗೆ ಕೂಡ ಅನುಭವ ಮಾಡಿಸುತ್ತಿದ್ದೇನೆ.

11. ನಾನು ಒಂದು ಕ್ಷಣದಲ್ಲಿ ನನ್ನ ಅನಾದಿ ಸ್ವರೂಪದಲ್ಲಿ ಸ್ಥಿತವಾಗುವ ಅಭ್ಯಾಸಿಆಗಿದ್ದೇನೆ.

12. ನಾನ್ನ ಸಾಧನೆ ಮತ್ತು ಸಾಧನಗಳು ಜೊತೆ ಜೊತೆ ಇವೆ.